# ರೋಗಿಯು ವೈದ್ಯನಾದನು

ಸ್ವಾಮಿ ಶಿವಾನಂದಜಿ (ಮಹಾಪುರುಷ್ ಮಹಾರಾಜ್)

ರಾಮಕೃಷ್ಣ ಮಹಾಸಂಘದ ಆಂಗ್ಲ ಮಾಸಪತ್ರಿಕೆ "ವೇದಾಂತ ಕೇಸರಿ" ಏಪ್ರಿಲ್ ೨೦೦೧ ರ ಸಂಚಿಕೆಯಲ್ಲಿ ಪ್ರಕಟವಾದ ಶ್ರೀ ಧರಿತ್ರೀ ಕುಮಾರ್ ದಾಸಗುಪ್ತ ಅವರ ಲೇಖನದ ಅನುವಾದ ಇದು. ಇದರ ಕನ್ನಡ ಅನುವಾದ ಮಾಡಿದವರು ಬೆಂಗಳೂರಿನ ರಾಮಕೃಷ್ಣಾಶ್ರಮದ ಭಕ್ತರಾದ ಡಾ.ಇ. ವಸಂತಕುಮಾರ್.

ಉಪೇಂದ್ರನಾಥ ಒಬ್ಬ ಮೂವತ್ತು ವರ್ಷ ವಯಸ್ಸಿನ ಯುವಕ. ೨೪ ಪರಗಣ ಜಿಲ್ಲೆಯ ಬಸೀರ್‌ಹಾಟ್ ಉಪವಿಭಾಗದ ಝೀಕ್ರ ಚಟ್ಕ ಬೇರೆ ಎಂಬಲ್ಲಿ ವಾಸವಾಗಿದ್ದನು. ಕಂಚಿನ ಬೀಗಗಳನ್ನು ಮಾಡುವ ವೃತ್ತಿಯಿಂದ ಸಾಕಷ್ಟು ಸಂಪಾದಿಸುತ್ತಿದ್ದನು. ಮಲೇರಿಯ ಸಾಂಕ್ರಾಮಿಕ ಜ್ವರದಿಂದ ಮೂರು ವರ್ಷಗಳ ಕಾಲ ನರಳಿದ ಆತ ತನ್ನ ಜೀವನದ ಕೊನೆಯ ಭಾಗವನ್ನು ಕಾಶಿಯಲ್ಲಿ ಕಳೆಯಲು ಭಗವಾನ್ ಶಿವ ಮತ್ತು ಶಿವಾನಿಯರ ಆವಾಸಸ್ಥಾನವೆನಿಸಿದ ಅಲ್ಲಿಗೆ ಬಂದನು. ಅಲ್ಲಿ ಗಂಗಾನದಿಯಲ್ಲಿ ಸ್ನಾನ ಮಾಡುತ್ತ, ವಿಶ್ವೇಶ್ವರ ಮತ್ತು ಅನ್ನಪೂರ್ಣೆಯರ ದೇವಾಲಯಗಳಿಗೆ ಹೋಗುತ್ತ, ಭಿಕ್ಷಾಟನೆ ಮಾಡುತ್ತ ಧರ್ಮಛತ್ರಗಳಲ್ಲಿ ದೊರೆತ ಅಲ್ಪ ಆಹಾರವನ್ನು ಸೇವಿಸುತ್ತ ಮತ್ತು ಕೊನೆಗೆ ಅಲ್ಲಿನ ಬಯಲಿನಲ್ಲಿ ನಿದ್ರಿಸುತ್ತ, ಸಂಕಷ್ಟಗಳಿಂದ ಹೇಗೋ ಕಾಲಯಾಪನೆ ಮಾಡುತ್ತಿದ್ದನು. ಆ ದಿನಗಳಲ್ಲಿ ಅವನು ಧರ್ಮಗ್ರಂಥಗಳಲ್ಲಿ ವಿಧಿಸಿರುವಂತೆ "ಗಂಗಾವಾರಿಯೇ ಔಷಧ, ಶ್ರೀಮನ್ನಾರಾಯಣನೇ ವೈದ್ಯ" ಎಂಬ ನುಡಿಯಂತೆ ಅಚಲವಾದ ಶ್ರದ್ಧೆ, ವಿಶ್ವಾಸ ಗಳಿಂದ ಭಗವಂತನಲ್ಲಿ ನಿರ್ಭರನಾಗಿ ದಿನಗಳನ್ನು ನೂಕುತ್ತಿದ್ದನು.

ದಿನಗಳು ಕಳೆದಂತೆ ಮಲೇರಿಯಾದಿಂದ ಗುಣಮುಖನಾಗದೆ ಉಪೇಂದ್ರನಾಥನು ಕೃಶವಾಗುತ್ತ ಬಂದನು. ಕಾಶಿಯಲ್ಲಿ ಬೇಕಾದಷ್ಟು ಧರ್ಮಛತ್ರಗಳೇನೋ ಇದ್ದವು, ಆದರೆ ಅವು ಉಪೇಂದ್ರನಾಥನಂತಹ ಭಿಕ್ಷುಕರನ್ನು ಅಷ್ಟೊಂದು ಆದರದಿಂದ ಕಾಣುತ್ತಿರಲಿಲ್ಲ. ಆದರೆ ಯಾರೇ ಆಗಲಿ ಕಾಶಿಯಲ್ಲಿ ಭಗವಂತನ ಮೇಲೆ ಶ್ರದ್ಧೆಯಿಟ್ಟು, ಧಾರ್ಮಿಕ ಸಾಧನೆಯಲ್ಲಿ ತೊಡಗುವುದಕ್ಕಾಗಿ ಭಿಕ್ಷೆಯನ್ನವಲಂಬಿಸಿದರೆ ಆತ ಅಂತಿಮ ಮುಕ್ತಿಯನ್ನು ಶೀಘ್ರವೇ ಪಡೆಯುವನು ಎಂಬ ಮಾತಿದೆ. ಮಧ್ಯಾಹ್ನ ಒಂದು ಅಥವಾ ಎರಡು ಗಂಟೆಯವರೆಗೆ ಶ್ರೀವಿಶ್ವನಾಥ-ಅನ್ನಪೂರ್ಣೆಯರ ದ್ವಾರಗಳ ಮುಂದೆ ತನ್ನ ಬಟ್ಟೆಯನ್ನು ಹರಡಿಕೊಂಡು ಬಿಡಾರ ಹೂಡಿದರೆ ಒಬ್ಬರು ಅಥವಾ ಇಬ್ಬರಿಗೆ ಊಟಕ್ಕೆ ಆಗುವಷ್ಟು ಅಕ್ಕಿ ಮತ್ತು ಇತರ ಪದಾರ್ಥಗಳು ಸಿಗುವುವು ಎಂಬುದು ನಿಜ. ಆದರೆ ಉಪೇಂದ್ರನಿಗೆ ಆಹಾರ ಸಾಮಗ್ರಿಗಳನ್ನು ಬೇಯಿಸಿ ಅಡುಗೆ ಮಾಡಲು ಶಕ್ತಿಯಿರಲಿಲ್ಲ. ಜತೆಗೆ, ಅಡುಗೆ ಮಾಡಲು ಸ್ಥಳವಾದರೂ ಅವನಿಗೆಲ್ಲಿರುವುದು? ಆದ್ದರಿಂದ ಅವನು ಭಿಕ್ಷೆ ಮಾಡುತ್ತ, ಧರ್ಮಛತ್ರಗಳಲ್ಲಿ ಎಲ್ಲರೂ ಊಟ ಮಾಡಿದ ಮೇಲೆ ಉಳಿದ ಅನ್ನವನ್ನೇ ಭಿಕ್ಷೆ ಪಡೆದು ಉಣ್ಣುತ್ತಿದ್ದನು.

ಹೀಗೆ ಕೆಲವು ತಿಂಗಳುಗಳು ಕಳೆದವು. ಒಮ್ಮೆ ಆತನಿಗೆ ಖಾಯಿಲೆ ಉಲ್ಬಣವಾಯಿತು. ಆ ಸ್ಥಿತಿಯಲ್ಲಿದ್ದ ಉಪೇಂದ್ರನನ್ನು ಕಂಡ ವ್ಯಕ್ತಿಯೊಬ್ಬನಿಗೆ ಆತನ ಮೇಲೆ ಕನಿಕರ ಉಂಟಾಯಿತು. ಆತ ಉಪೇಂದ್ರನಿಗೆ ರಾಮಕೃಷ್ಣ ಸೇವಾಶ್ರಮದ ಬಗ್ಗೆ ತಿಳಿಸಿ ಅಲ್ಲಿಗೆ ಹೋದರೆ ಆತನಿಗೆ ಅಗತ್ಯವಾದದ್ದೆಲ್ಲ—ಆಹಾರ, ವಾಸಸ್ಥಳ ಹಾಗೂ ಉಚಿತ ಔಷಧಿ ಮುಂತಾದುವೆಲ್ಲ ದೊರಕುವುದೆಂದು ಹೇಳಿದನು. ಇದನ್ನು ಕೇಳಿದ ಉಪೇಂದ್ರನು ಸೇವಾಶ್ರಮಕ್ಕೆ ಹೋಗಿ ತನಗೆ ತೀರಾ ಅಗತ್ಯವಾಗಿದ್ದ ಔಷಧಿಗಳನ್ನು ಪಡೆದನು. ಕೆಲವು ದಿನಗಳು ಈ ರೀತಿ ಕಳೆದರೂ ಆತನ ವ್ಯಾಧಿಯಲ್ಲಿ ಸುಧಾರಣೆಯಾಗಲಿಲ್ಲ. ಇದು ಸೇವಾಶ್ರಮವನ್ನು ನಡೆಸುತ್ತಿದ್ದವರ ಗಮನಕ್ಕೆ ಬಂದಿತು. ಆದ್ದರಿಂದ ಚಿಕಿತ್ಸೆಗಾಗಿ ಉಪೇಂದ್ರನನ್ನು ಅವರು ಸೇವಾಶ್ರಮದಲ್ಲಿಯೇ ಇಟ್ಟುಕೊಂಡರು. ಸೇವಾಶ್ರಮದವರ ಆರೈಕೆ ಮತ್ತು ಔಷಧೋಪಚಾರಗಳಿಂದ ಉಪೇಂದ್ರನು ತನ್ನ ವ್ಯಾಧಿಯಿಂದ ಗುಣಮುಖನಾಗುವಂತೆ ಆಯಿತು. ಸುಮಾರು ೭-೮ ತಿಂಗಳಲ್ಲಿ ಸಂಪೂರ್ಣವಾಗಿ ಚೇತರಿಸಿಕೊಂಡ ಆತ ಕ್ರಮೇಣ ಹಿಂದಿನ ಆರೋಗ್ಯ ಮತ್ತು ಶಕ್ತಿಯನ್ನು ಮರಳಿ ಪಡೆದನು.

ಈಗ ತನ್ನ ಸ್ವಗ್ರಾಮಕ್ಕೆ ಹೋಗಲು ಇಚ್ಛಿಸಿದರೆ ನೆರವು ನೀಡುವುದಾಗಿ ಸೇವಾಶ್ರಮದವರು ತಿಳಿಸಿದರು. ಆದರೆ ಉಪೇಂದ್ರನಿಗೆ ಸೇವಾಶ್ರಮದವರ ನಿಃಸ್ವಾರ್ಥ ಪ್ರೀತಿ ಮತ್ತು ಅಲ್ಲಿನ ವಾತಾವರಣದಿಂದ ದೂರವಾಗಲು ಮನಸ್ಸಾಗಲಿಲ್ಲ. ಹೀಗಾಗಿ ಅವನು ಅವರನ್ನು, ತನಗೆ ಸೇವಾಶ್ರಮದಲ್ಲಿಯೇ ಯಾವುದಾದರೂ ಕೆಲಸಮಾಡಿಕೊಂಡು ಇರಲು ಅವಕಾಶ ನೀಡಿದರೆ ಅವರಿಗೆ ತಾನು ಚಿರಋಣಿಯಾಗಿರುವುದಾಗಿ ತಿಳಿಸಿದನು. ಸೇವಾಶ್ರಮದ ಮುಖ್ಯಸ್ಥರು ಅವನ ಪ್ರಾರ್ಥನೆಯನ್ನು ಮನ್ನಿಸಿ ಅವನು ಅಲ್ಲಿಯೇ ತಂಗಲು ವ್ಯವಸ್ಥೆ ಮಾಡಿದರು.

ಸೇವಾಶ್ರಮದಲ್ಲಿ ಕೆಲಸಕ್ಕೆ ಕೊರತೆಯೇ? ಉಪೇಂದ್ರನಿಗೆ ಮಾಡಲು ಸಾಕಷ್ಟು ಕೆಲಸವಿತ್ತು. ಅವನು ಅತ್ಯಂತ ಸಂತೋಷದಿಂದ ಇತರರಿಗೆ ಸೇವೆ ಮಾಡುವ ಪುಣ್ಯಕಾರ್ಯದಲ್ಲಿ ನಿರತನಾದನು. ದುರ್ಬಲರು, ವೃದ್ಧರು, ಮನಃಸ್ವಾಸ್ಥ್ಯವಿಲ್ಲದವರು, ಅಂಗವಿಕಲರು ಮತ್ತು ಅಂಧರೋಗಿಗಳು ಇವರೆಲ್ಲರ ಸೇವೆಯನ್ನು ಬಹಳ ಶ್ರದ್ಧೆ ಮತ್ತು ದಕ್ಷತೆಯಿಂದ ಮಾಡುತ್ತಿದ್ದನು. ಅವನ ಸೇವಾದಕ್ಷತೆ ಸೇವಾಶ್ರಮದವರಿಗೆ ಮೆಚ್ಚುಗೆಯಾಯಿತು. ಅವನ ನಿಃಸ್ಪೃಹ ಸೇವೆಯನ್ನು ನೋಡುತ್ತಿದ್ದವರಿಗೆ ಅವನು ತನ್ನ ಸ್ವಂತ ವೃದ್ಧ ಮಾತಾಪಿತರ

ಸೇವೆಯನ್ನೇ ಮಾಡುತ್ತಿದ್ದಾನೇನೋ ಎನಿಸುತ್ತಿತ್ತು. ಬುದ್ಧಿ ಭ್ರಮಣೆಯ ರೋಗಿಗಳು ಆಹಾರವನ್ನು ತಿರಸ್ಕರಿಸಿದರೆ ತನ್ನ ಕೈಗಳಿಂದ ಅವರಿಗೆ ತಿನ್ನಿಸುತ್ತಿದ್ದನು. ಅವರು ಅವನನ್ನು ಬಯ್ಯುತ್ತಿದ್ದರು, ಹೊಡೆ ಯುತ್ತಿದ್ದರು. ಆದರೂ ಅವನ್ನು ಲೆಕ್ಕಿಸದೆ ಅತ್ಯಂತ ಶ್ರದ್ಧೆಯಿಂದ ತನ್ನ ಕರ್ತವ್ಯವನ್ನು ಮಾಡುತ್ತಿದ್ದನು. ಬಹು ಬೇಗನೇ ಉಪೇಂದ್ರನು ಸೇವಾಶ್ರಮದವರಿಗೆಲ್ಲ ಅಚ್ಚುಮೆಚ್ಚಾದ ಶ್ರೇಷ್ಠ ಕೆಲಸಗಾರನಾದನು.

ಸೇವಾಶ್ರಮದ ಶುಶ್ರೂಷಕರು ಬಹುತೇಕ ಸ್ವಾಮಿ ವಿವೇಕಾ ನಂದರ ಬ್ರಹ್ಮಚಾರಿ ಶಿಷ್ಯರಾಗಿದ್ದರು. ಸೇವಾಕಾರ್ಯದಿಂದ ಅವರಿಗೆ ಬಿಡುವು ದೊರೆತಾಗ ಅವರು ಶ್ರೀರಾಮಕೃಷ್ಣರ, ಸ್ವಾಮೀಜಿಯವರ ಮತ್ತು ಶ್ರೀರಾಮಕೃಷ್ಣರ ಪ್ರತ್ಯಕ್ಷಶಿಷ್ಯರ ಹಾಗೂ ಒಡನಾಡಿಗಳ ಜೀವನ ಮತ್ತು ಬೋಧನೆಗಳ ಅಧ್ಯಯನ ಮತ್ತು ವಿಚಾರದಲ್ಲಿ ತೊಡಗುತ್ತಿದ್ದರು. ಉಪೇಂದ್ರನೂ ಕೂಡ ಅದರಲ್ಲಿ ಭಾಗಿಯಾಗು ತ್ತಿದ್ದನು. ಸ್ವಾಮೀಜಿಯವರ ಕರ್ಮಯೋಗದ ಮೇಲಣ ಬೋಧನೆಗಳು ಅವನ ಮೇಲೆ ಆಳವಾದ ಪ್ರಭಾವವನ್ನುಂಟು ಮಾಡಿದ್ದವು. ಹಗಲು ರಾತ್ರಿ ಅವನು ರೋಗಿಗಳ ಮಧ್ಯದಲ್ಲಿರು ತ್ತಿದ್ದನು. ರೋಗಿಗಳ ಸ್ಥಿತಿಯ ಬಗ್ಗೆ ಸದಾ ಕಾತರನಾಗಿರುತ್ತಿದ್ದುದ ರಿಂದ ಅನೇಕ ವೇಳೆ ಅವನಿಗೆ ನಿದ್ರಿಸಲೂ ಆಗುತ್ತಿರಲಿಲ್ಲ. ಕಠಿಣ ಶ್ರಮದ ದುಡಿತದಿಂದಾಗಿ ಬೆನ್ನಿನ ವ್ಯಾಧಿಗೆ ತುತ್ತಾದನು. ವೈದ್ಯರ ಸಲಹೆಯ ಮೇರೆಗೆ ರೋಗಿಗಳ ಬಳಿಗೆ ಅವನನ್ನು ಕೆಲವು ದಿನಗಳು ಬಿಡಲಿಲ್ಲ. ಕೆಲವು ದಿನಗಳ ಚಿಕಿತ್ಸೆ ಮತ್ತು ವಿಶ್ರಾಂತಿಯ ನಂತರ ಅವನು ಮತ್ತೆ ಎಂದಿನಂತೆ ಕೆಲಸ ಮಾಡಲಾರಂಭಿಸಿದನು.

ಸೇವಾಶ್ರಮಕ್ಕೆ ಸಹಾಯ ನೀಡಲು ಬಯಸುವ ಕಾಶಿಯ ನಿವಾಸಿ ಗಳಿಗೆ ನಿತ್ಯ ಅವರು ಅಡುಗೆ ಪ್ರಾರಂಭಿಸುವುದಕ್ಕೆ ಮುಂಚೆ ಒಂದು ಹಿಡಿ ಅಕ್ಕಿಯನ್ನು ಭಿಕ್ಷೆಯಂತೆ ಹಾಕಿ ತೆಗೆದಿಡಲು ಒಂದು ಮಣ್ಣಿನ ಪಾತ್ರೆಯನ್ನು ಸೇವಾಶ್ರಮದವರೇ ಒದಗಿಸಿರುತ್ತಾರೆ. ಆಶ್ರಮದ ಬ್ರಹ್ಮಚಾರಿಯೊಬ್ಬರು ವಾರದ ಕೊನೆಯಲ್ಲಿ ಪ್ರತಿ ಮನೆಯಿಂದ ಅದನ್ನು ತೆಗೆದುಕೊಂಡು ಬರುತ್ತಿದ್ದರು. ಹೀಗೆ ಪ್ರತಿ ತಿಂಗಳು ಐದರಿಂದ ಆರು ಮಣ ಅಕ್ಕಿ ಸಂಗ್ರಹವಾಗುತ್ತಿತ್ತು. ಈ ಸಂಗ್ರಹಣೆ ಅನೇಕ ಬಡವ, ಅನಾಥ, ಮತ್ತು ರೋಗದಿಂದ ನರಳುತ್ತಿರುವವರ ಸೇವೆಯಲ್ಲಿ ಉಪಯೋಗವಾಗುತ್ತಿತ್ತು. ಎಲ್ಲರ ಮನೆಗಳಿಂದ ಅಕ್ಕಿ ಯನ್ನು ಸಂಗ್ರಹಿಸಿ ಹೊತ್ತುಕೊಂಡು ಬರುವುದು ಶ್ರಮದಾಯಕವಾದ ಕೆಲಸವೇ ಆಗಿತ್ತು. ಈಗ ಈ ಶ್ರಮದಾಯಕವಾದ ಕೆಲಸವನ್ನು ಮಾಡಲು ಉಪೇಂದ್ರನಾಥನು ಮುಂದೆ ಬಂದನು. ಅಷ್ಟೇ ಅಲ್ಲ, ಆತನೇ ಆಸಕ್ತಿ ವಹಿಸಿ ಹಾಗೆ ಅಕ್ಕಿ ಭಿಕ್ಷೆ ನೀಡುವವರ ಮನೆಗಳ ಸಂಖ್ಯೆಯನ್ನು ಇಮ್ಮಡಿಗೊಳ್ಳುವಂತೆ ಮಾಡಿದನು. ಅಂತಹ ಮನೆಗಳ ಸಂಖ್ಯೆ ಇನ್ನೂರನ್ನೂ ದಾಟಿತು. ಹೀಗೆ ಆತನ ವೈಯಕ್ತಿಕ ಪ್ರಯತ್ನ ದಿಂದಾಗಿ ಆಶ್ರಮದ ಸೇವಾಕಾರ್ಯಕ್ಕೆ ಸಾಕಷ್ಟು ನೆರವು ದೊರಕಿ ದಂತಾಯಿತು.

ಒಮ್ಮೆ ಸೇವಾಶ್ರಮದಲ್ಲಿ ಚಿಕಿತ್ಸೆ ಪಡೆಯುತ್ತಿದ್ದವನ ಸೇವೆಯಲ್ಲಿ ತೊಡಗಿದ್ದಾಗ ಉಪೇಂದ್ರನಾಥನು ಭಯಂಕರವಾದ ಸಿಡುಬು ರೋಗಕ್ಕೆ ತುತ್ತಾದನು. ಅಂತಹ ಪರಿಸ್ಥಿತಿಯಲ್ಲೂ ಧೃತಿಗೆಡದೆ ಅಲ್ಲಿನ ರೋಗಿಗಳ ಸೇವೆಗೆ ಯಾವುದೇ ಕುಂದು ಬಾರದಂತೆ ನೋಡಿ ಕೊಂಡನು. ಹೀಗಾಗಿ ಅವರೆಲ್ಲರನ್ನೂ ಮರಳಿ ಆರೋಗ್ಯ ಸ್ಥಿತಿಗೆ ತರುವುದರಲ್ಲಿ ಯಶಸ್ವಿಯಾದನು. ಆದರೆ ದುರದೃಷ್ಟವಶಾತ್ ತನಗೇ ತಗುಲಿಕೊಂಡಿದ್ದ ಸಿಡುಬುರೋಗದಿಂದ ಚೇತರಿಸಿಕೊಳ್ಳಲಾಗದೆ ಅದಕ್ಕೆ ಬಲಿಯಾದನು. ಕಾಶಿ ಸೇವಾಶ್ರಮದಲ್ಲಿ ಹೀಗೆ ಪ್ರಾಣತ್ಯಾಗ ಮಾಡಿದ ಸೇವಾವ್ರತಿ ಉಪೇಂದ್ರನಾಥನು ಈ ಅನಿತ್ಯವಾದ ಪ್ರಪಂಚ ವನ್ನು ತೊರೆದು ನಿತ್ಯವಾದ ಬದುಕನ್ನು ಕಂಡುಕೊಂಡನು.

ಅವನ ಅಕಾಲ ನಿಧನದಿಂದ ಕಂಗಾಲಾದವರು ಒಬ್ಬಿಬ್ಬರಲ್ಲ. ಸೇವಾಶ್ರಮದಲ್ಲಿ ಅವನು ಆರೈಕೆ ಮಾಡುತ್ತಿದ್ದ ಎಲ್ಲ ರೋಗಿಗಳು, ಸೇವಾಶ್ರಮದ ಹೊರಗೆ ಅವನಿಂದ ಔಷಧೋಪಚಾರಗಳನ್ನು ಪಡೆಯುತ್ತಿದ್ದ ಸ್ವಾಸ್ಥ್ಯವಿಲ್ಲದವರು, ವೃದ್ಧರಾದಿಯಾಗಿ ಎಲ್ಲರೂ ಉಪೇಂದ್ರನಾಥನ ಸದ್ಗುಣಗಳನ್ನು ನೆನೆಯುತ್ತ, ತಮ್ಮೆಲ್ಲರನ್ನೂ ಬಿಟ್ಟುಹೋದ ಆತನನ್ನು ನೆನೆದು ದುಃಖಿಸುತ್ತಿದ್ದರು. ಧನ್ಯ ಉಪೇಂದ್ರನಾಥ! ನಿಜವಾಗಿ ನೀನು ನಿನ್ನ ಜೀವನವನ್ನು ಪ್ರಾಣ ಭಯದ ಆಲೋಚನೆ ಕಿಂಚಿತ್ತೂ ಇಲ್ಲದಂತೆ ಒಂದು ಮಹೋದ್ದೇಶ ಕ್ಕಾಗಿ ಮಂತ್ರದೀಕ್ಷೆಯನ್ನು ಪಡೆದು ಅದಕ್ಕಾಗಿ ನಿನ್ನ ಪ್ರಾಣವನ್ನು ಅರ್ಪಿಸಿ ಸಾರ್ಥಕನಾದೆ. ಪ್ರಿಯ ಓದುಗರೇ, ಆ ಮಂತ್ರ ಯಾವುದೆಂದು ತಿಳಿಯಬಯಸುವಿರಾ? ಅದೆಂದರೆ, ಎಲ್ಲ ಜೀವಿಗಳಲ್ಲಿಯೂ ಅಂತರ್ಯಾಮಿಯಾಗಿ ಭಗವಂತನಿರುವನು. **ಜೀವಿಗಳಿಗೆ ನಿಃಸ್ವಾರ್ಥ ಸೇವೆಯನ್ನು ಸಲ್ಲಿಸುವುದರಿಂದ ಭಗವಂತನಿಗೇ ಸೇವೆ ಸಲ್ಲಿಸಿ ದಂತಾಗುವುದು. ಸಾಧಕನು ಪೂಜೆ, ಜಪ, ಧ್ಯಾನ, ಅಧ್ಯಯನ ಮತ್ತು ತಪಸ್ಸು ಇವುಗಳೆಲ್ಲದರಿಂದ ಪಡೆಯುವ ಫಲವನ್ನು, ಜೀವಿಗಳಿಗೆ ಬರೀ ನಿಃಸ್ವಾರ್ಥ ಸೇವೆಯನ್ನು ಮಾಡುವುದರಿಂದಲೇ ಪಡೆಯಬಹುದು.** ಒಂದು ದೃಷ್ಟಿಯಿಂದ ಈ ನಿಃಸ್ವಾರ್ಥ ಸೇವೆಯಿಂದ ಪಡೆಯುವ ಫಲ ಹೆಚ್ಚು ಶಾಶ್ವತವಾದುದು. ಉಪೇಂದ್ರನನ್ನು ಸೇವಾ ಶ್ರಮದ ಸದಸ್ಯನನ್ನಾಗಿ ತೆಗೆದುಕೊಂಡಾಗ ಅವನಿಗೆ ಉಪದೇಶಿಸಲಾದ ಮಹಾ ಮಂತ್ರ ಅದೇ. ಅವನು ಆಶ್ರಮವನ್ನು ಒಬ್ಬ ರೋಗಿಯಂತೆ ಪ್ರವೇಶಿಸಿದನು. ಆಶ್ರಮದಲ್ಲಿ ಭಗವಂತನ ಕೆಲಸವನ್ನು ಒಬ್ಬ ವೈದ್ಯನಂತೆ, ನಿಃಸ್ವಾರ್ಥತೆಯಿಂದ ಮಾಡಿದನು. ತನ್ನ ದೇಹವನ್ನು ಭಗವಾನ್ ಶಿವ ಮತ್ತು ಶಿವಾನಿಯರ ಶಾಶ್ವತ ಸ್ಥಾನವಾದ ಕಾಶಿ ಯಲ್ಲಿ ತ್ಯಜಿಸಿದನು. ಸ್ವಾಮಿ ವಿವೇಕಾನಂದರ ಕರ್ಮಯೋಗದ ಬೋಧನೆಗಳು ಅದ್ಭುತವಾದವು! ಅವರಿಗೆ ನಿತ್ಯ ಚೈತನ್ಯದ ಸ್ಫೂರ್ತಿ ಯಾಗಿದ್ದ, ಆ ಮಹಾಮಂತ್ರವನ್ನು ಉಪದೇಶಿಸಿದ, ಮಾನವ ಕೋಟಿಯ ಒಳಿತಿಗಾಗಿ ಜನ್ಮತಾಳಿದ ಮಹಾತ್ಮರಾದ ಅವರ ಗುರು ದೇವರಿಗೆ ಜಯವಾಗಲಿ! ನಂತರ ಸ್ವಾಮೀಜಿಯವರಿಂದ ಆ ಮಂತ್ರ ವನ್ನು ಉಪದೇಶವಾಗಿ ಪಡೆದ ಇತರರಿಗೂ ಜಯವಾಗಲಿ!

❋ ❋ ❋